# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮುಳಬಾಗಿಲು

## ಸಿಸಿ.ನಂ. 228/2018

| | | |
|---|---|---|
| ಹೆಸರು | : ಶ್ರೀಮತಿ ವೈ.ಆರ್ ಭವಾನಿ | ಸಿಡಬ್ಲೂ- 05 |
| ಗಂಡನ ಹೆಸರು | : ಶಂಕರ್ ಬಾಬು | ಪಿ.ಡಬ್ಲೂ-02 |
| ವಯಸ್ಸು | : 47 ವರ್ಷ | ದಿನಾಂಕಃ- 08.11.2023 ರಂದು |
| ಉದ್ಯೋಗ | : ಪಿ.ಡಿ.ಓ, ದೂಲಪಲ್ಲಿ ಗ್ರಾ.ಪಂಚಾಯಿತಿ | ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |
| ವಾಸಸ್ಥಳ | : ಮುಳಬಾಗಿಲು | |

**ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ**

ದಿನಾಂಕಃ 05.04.2010 ರಿಂದ ಇಲ್ಲಿಯ ತನಕ ನಾನು ಮುಳಬಾಗಿಲು ತಾಲ್ಲೂಕಿನ ದೂಲಪಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ಚಾಸಾ 1, 2, 3 ಮತ್ತು 4 ರವರು ಗೊತ್ತು, ಚಾಸಾ 9 ಮತ್ತು 11 ರವರು ಗೊತ್ತು, ಚಾಸಾ 6, 7, 8 ಮತ್ತು 10 ರವರು ಗೊತ್ತಿರುವುದಿಲ್ಲ.

ದಿನಾಂಕಃ 17.03.2017 ರಂದು ನಾನು ಕಛೇರಿಯಲ್ಲಿದ್ದಾಗ ಚಾಸಾ 22 ರವರಿಂದ ನನಗೆ ಒಂದು ಫೋನ್ ಕರೆ ಬಂದಿದ್ದು, 'ನಿಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಬಿ.ಹೊಸಹಳ್ಳಿ ಸರ್ವೇ ನಂ. 130 ರಲ್ಲಿ ಅಕ್ರಮವಾಗಿ ಮದ್ಯ ತಯಾರಿಕೆ ಮಾಡುತ್ತಿದ್ದಾರೆ ಎಂದು ತಿಳಿಸಿ' ಅದಕ್ಕೆ ನೀವು ಬರಬೇಕು ಎಂದು ಹೇಳಿದರು. ಅದರಂತೆ ನಾನು ನಮ್ಮ ಮೇಲಾಧಿಕಾರಿಯಾದ ಕಾರ್ಯನಿರ್ವಾಹಕಾಧಿಕಾರಿಯವರಿಗೆ ತಿಳಿಸಿ ಅವರು ಒಪ್ಪಿಗೆ ನೀಡಿದರ ಮೇರೆಗೆ ನಾನು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಬಿ.ಹೊಸಹಳ್ಳಿ ಗ್ರಾಮದ ಸರ್ವೇ ನಂ. 130ರ ಜಮೀನಿನ ಬಳಿ ಹೋಗಿರುತ್ತೇನೆ. ಸದರಿ ಸರ್ವೇ ನಂಬರ್‌ನ ಜಮೀನಿನಲ್ಲಿ ಒಂದು ಶೆಡ್ ಇದ್ದು ಸ್ಥಳದಲ್ಲಿ ಎಲ್ಲಾ ಪೊಲೀಸ್ ಅಧಿಕಾರಿಗಳು ಮತ್ತು ಕೆಲವರು ಗ್ರಾಮಸ್ಥರು ಇದ್ದರು. ಅಲ್ಲಿ ಹೋಗಿ ನೋಡಿದಾಗ ಅಕ್ರಮ

ಮದ್ಯ ತಯಾರಿಕೆಯ ಎಲ್ಲಾ ವಸ್ತುಗಳು ಸ್ಥಳದಲ್ಲಿ ಇದ್ದವು. ಆ ಸಮಯದಲ್ಲಿ ಪೊಲೀಸ್ ಅಧಿಕಾರಿಗಳು ಅಲ್ಲಿ ಕೆಲಸ ಮಾಡುತ್ತಿದ್ದ ಮಂಜುನಾಥ್, ಮಾರುತಿ, ನಾಗರಾಜ್, ಕೃಷ್ಣ, ಮುನಿರತ್ನಪ್ಪ ಮತ್ತು ದೇವೇಂದ್ರ ಎಂಬುವವರನ್ನು ಲೈಸೆನ್ಸ್ ಬಗ್ಗೆ ವಿಚಾರಿಸಿದಾಗ ಅವರುಗಳು ಇಲ್ಲವೆಂದು ತಿಳಿಸಿದರು. ಆಗ ಪೊಲೀಸ್ ಅಧಿಕಾರಿಗಳು ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ, ಪಂಚನಾಮೆಯಡಿಯಲ್ಲಿ ಪೊಲೀಸರು ಸ್ಥಳದಲ್ಲಿದ್ದ ವಸ್ತುಗಳಾದ ಖಾಲಿ ರೆಟ್ಟಿನ ಪೆಟ್ಟಿಗೆಗಳು, 6 ಖಾಲಿ ನೀಲಿ ಬ್ಯಾರಲ್‌ಗಳು, 50 ಖಾಲಿ ಬಿಳಿ ಕ್ಯಾನ್‌ಗಳು, ಒಂದು ಗಮ್ ಬಾಟೆಲ್, ಒಂದು ಬಾಟೆಲ್ ಕ್ರಿಯೇಟಿವ್ ಆರೋಮ್ಯಾಟಿಕ್ ದ್ರಾವಕ, 5 ಲೀಟರ್ ಸಾಮರ್ಥ್ಯದ ಕಂದು ಬಣ್ಣದ ದ್ರಾವಣ, ಒಂದು ಬಂಡಲ್ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ಸ್, ರೆಡ್ ರೋಸ್ ಫ್ರೆಮ್ ಬ್ರಾಂದಿಯ ಲೇಬಲ್ಸ್‌ಗಳು, 36 ಸ್ಪಿರಿಟ್ ಕ್ಯಾನ್‌ಗಳು, 48 ಗ್ರೀನ್ ಮ್ಯಾಜಿಕ್ ಬ್ರಾಂದಿ ಬಾಟೆಲ್‌ಗಳು, ಒಂದು ರೆಟ್ಟಿನ ಪೆಟ್ಟಿಗೆಯಲ್ಲಿ ಕಾರ್ಕ್ಸ್, ಒಂದು ಪ್ಲಾಸ್ಟಿಕ್ ಬ್ಯಾಗ್‌ನಲ್ಲಿ ಕಂದು ಮತ್ತು ಗೋಲ್ಡ್ ಬಣ್ಣದ ಮುಚ್ಚಳಗಳು, 40 ನೀರಿನ ಕ್ಯಾನ್‌ಗಳು, ಆಲ್ಕೋಮೀಟರ್, ಗೋಲ್ಕ್‌ಂಡ ಗ್ರೀನ್ ಲೇಬಲ್ಸ್‌ಗಳು ಮತ್ತು ಇತರೇ ಪದಾರ್ಥಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 12-00 ರಿಂದ 3-30 ರ ತನಕ ಜರುಗಿಸಿರುತ್ತಾರೆ. ಸಾಕ್ಷಿಯು ನಿ.ಪಿ 1 ಪಂಚನಾಮೆಯ ಪ್ರತಿ ಪುಟದಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿ.ಪಿ 1(ಜಿ) ಯಿಂದ (ಎಲ್) ಎಂದು ಗುರುತಿಸಲಾಯಿತು.

***ಈ ಹಂತದಲ್ಲಿ ಮಾನ್ಯ ಎ.ಪಿ.ಪಿ ರವರ ಕೋರಿಕೆಯ ಮೇರೆಗೆ ಪಿ.ಡಬ್ಲ್ಯೂ 2 ರವರ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ನೀಡಲಾಯಿತು.***

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

ಸಹಿ/-

**(ಈಶ್ವರ)**

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಮುಳಬಾಗಿಲು.